ಇ) ಅನೌಪಚಾರಿಕ ಪಡಿತರ ಪ್ರದೇಶದ ಪಡಿತರ ಚೀಟಿದಾರರಿಗೆ 8 ಲೀಟರ್, ನಗರ 6 ಲೀಟರ್, ಗ್ರಾಮಾಂತರ 4 ಲೀಟರ್ ಸೀಮೆಎಣ್ಣೆಯನ್ನು ವಿತರಣೆ ಮಾಡಲಾಗುತ್ತಿದೆ. ಬೇರೆ ಪಡಿತರ ಪದಾರ್ಥಗಳಿಗೆ ವಿತರಣಾ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

ಈ) ಇಲ್ಲ.

ಉ) ಹಿಂದೆ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ವಿತರಣೆ ಪ್ರಮಾಣವಿತ್ತು. ಪ್ರತಿ ಜಿಲ್ಲೆಯಲ್ಲಿ ಇರುವ ಅಂತಿಮ ಶಿಲ್ಕಿನ ಆಧಾರದ ಮೇಲೆ ಹಂಚಿಕೆಯನ್ನು ನೀಡಲಾಗುತ್ತಿತ್ತು.

ಪ್ರಸ್ತುತ ಅನೌಪಚಾರಿಕ ಪಡಿತರ ಪ್ರದೇಶದ ಪಡಿತರ ಚೀಟಿದಾರರಿಗೆ 8 ಲೀಟರ್, ನಗರ ಪ್ರದೇಶಗಳಲ್ಲಿ 6 ಲೀಟರ್ ಗ್ರಾಮಾಂತರ ಪ್ರದೇಶಗಳಲ್ಲಿ 4 ಲೀಟರ್ ಸೀಮೆಎಣ್ಣೆಯನ್ನು ವಿತರಣೆ ಮಾಡಲಾಗುತ್ತಿದೆ.

ಊ) ಇಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಏಕರೀತಿಯ ಸೀಮೆಎಣ್ಣೆ ವಿತರಣಾ ಪ್ರಮಾಣ ನೀಡಲಾಗುತ್ತಿದೆ.

ರಾಜ್ಯದಲ್ಲಿ ನಕ್ಸಲೀಯರನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ

59 (309) : ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕ್ಸಲೀಯರ ಹಾವಳಿ ರಾಜ್ಯದಲ್ಲಿ ವ್ಯಾಪಕಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರ ಇವರ ವಿರುದ್ಧ ಎಷ್ಟು ವರ್ಷಗಳಿಂದ ಕಾರ್ಯಾಚರಣೆ ನಡೆಸುತ್ತಿದೆ ಮತ್ತು ಕಾರ್ಯಾಚರಣೆಗಾಗಿ ವೆಚ್ಚ ಮಾಡಿರುವ ಹಣ ಎಷ್ಟು;

ಇ) ನಕ್ಸಲೀಯರ ಹಾವಳಿಗೊಳಗಾಗಿ ಈವರೆಗೂ ಆಸ್ತಿಪಾಸ್ತಿಯ ಹಾನಿ ಎಷ್ಟು? ಮೃತಪಟ್ಟಿರುವ ಸಾರ್ವಜನಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು);

ಈ) ನಕ್ಸಲೀಯರ ಹಾವಳಿಯನ್ನು ನಿರ್ಮೂಲನ ಮಾಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯ ಯೋಜನೆಗಳೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು. ರಾಜ್ಯದ ಕೆಲವೊಂದು ಗಡಿಭಾಗ ಜಿಲ್ಲೆಗಳಲ್ಲಿ ಮತ್ತು ಮಲೆನಾಡಿನ ಕೆಲವೊಂದು ಪ್ರದೇಶಗಳಲ್ಲಿ ನಕ್ಸಲೀಯರ ಚಟುವಟಿಕೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ 1960 ರಲ್ಲಿ ನಕ್ಸಲೀಯರ ಚಟುವಟಿಕೆಗಳು ಗಮನಕ್ಕೆ ಬಂದಿದ್ದು, ನಂತರ ಆಂಧ್ರಪ್ರದೇಶ ರಾಜ್ಯಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಾದ ಬೀದರ್ (1996 ರಿಂದ), ಗುಲ್ಬರ್ಗಾ (1997 ರಿಂದ), ಕೋಲಾರ 1999 ರಿಂದ), ರಾಯಚೂರು (1999 ರಿಂದ) ಇತ್ತೀಚೆಗೆ (ಒಂದೂವರೇ ವರ್ಷದಿಂದ) ಮಲೆನಾಡಿನ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ಮಂಗಳೂರುಗಳಲ್ಲಿ ನಕ್ಸಲೀಯರ ಚಟುವಟಿಕೆಗಳು ವರದಿಯಾದ ನಂತರದಿಂದ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ಕಾರ್ಯಾಚರಣೆಗೆ ವಿಶೇಷವಾದ ಪ್ರತ್ಯೇಕವಾದ ಯಾವುದೇ ವೆಚ್ಚ ಮಾಡಿರುವುದಿಲ್ಲ.

ಇ) ನಕ್ಸಲೀಯರ ಹಾವಳಿಯಿಂದಾಗಿ ಸುಮಾರು ರೂ. 10,40,000–00ಗಳ ಜಿಲ್ಲೆಯ ಆಸ್ತಿ ಪಾಸ್ತಿಗಳಿಗೆ ಹಾನಿಯಾಗಿದ್ದು, ಯಾವುದೇ ಸಾರ್ವಜನಿಕ ಜೀವ ಹಾನಿ ಆಗಿರುವುದಿಲ್ಲ.

ಈ) ನಕ್ಸಲೀಯರ ಹಾವಳಿಯನ್ನು ನಿರ್ಮೂಲನ ಮಾಡಲು ಈ ಕೆಳಕಂಡ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

1) ಅತಿಯಾದ ನಕ್ಸಲೀಯರ ಪ್ರಭಾಕ್ಕೆ ಒಳಪಟ್ಟ ಠಾಣೆಗಳಿಗೆ ಹೆಚ್ಚಿನ ಪ್ರಹಾರ ಬಲವನ್ನು ಒದಗಿಸಲಾಗಿದೆ.

2) ಪೊಲೀಸ್ ಪೆಟ್ರೋಲಿಂಗ್ ಹಾಗೂ ಸ್ಥಾಯಿ ಕಾವಲು ಕರ್ತವ್ಯಗಳನ್ನು ಚುರುಕುಗೊಳಿಸಲಾಗಿದೆ.

3) ಹೊಸ ವಾಹನಗಳು, ಆಧುನಿಕ ಆಯುಕಗಳು, ಆಧುನಿಕ ಉಪಕರಣಗಳು ಮತ್ತು ಸಾರ್ವಶಕ್ತಿ ಚಾಲಿತ ಉಪಕರಣಗಳನ್ನು ನಕ್ಸಲೀಯರ ಚಟುವಟಿಕೆಗಳು ಇರುವ ಪ್ರದೇಶದ ಪೊಲೀಸ್ ಠಾಣೆಗಳಿಗೆ ಒದಗಿಸಲಾಗಿದೆ.

4) ಸಿಬ್ಬಂದಿ ವರ್ಗದವರಿಗೆ ಪುನಶ್ಚೇತನ ತರಬೇತಿಗಳನ್ನು ಹಾಗೂ ಆಯುಧ ಕವಾಯತುಗಳನ್ನು ಆಗಾಗ್ಗೆ ಕೈಗೊಳ್ಳಲಾಗಿರುತ್ತದೆ.

5) ನಿಯಮಿತವಾಗಿ ನಕ್ಸಲೀಯರ ಚಟುವಟಿಕೆಗಳು ಇರುವ ಪ್ರದೇಶಗಳಲ್ಲಿ ಜನ ಸಂಪರ್ಕ ಸಭೆಗಳನ್ನು ನಡೆಸಿ, ಜನರಿಗೆ ಕಾನೂನು ಮತ್ತು ಅಪರಾಧ ಹಾಗೂ ಶಿಕ್ಷೆಯ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

6) ನಕ್ಸಲೀಯರ ಪ್ರಭಾವಿತ ಹಳ್ಳಿ ಮತ್ತು ತಾಂಡಗಳಿಗೆ ಆರೋಗ್ಯ ಕೇಂದ್ರ, ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ ಮತ್ತು ಇತರ ಮೂಲ ಸೌಲಭ್ಯಗಳನ್ನು ಒದಗಿಸಿದ್ದು, ತಾಲ್ಲೂಕು ಸ್ಥಳಗಳಿಗೆ ರಸ್ತೆ ಸಂಪರ್ಕಗಳನ್ನು ಕಲ್ಪಿಸಲಾಗಿದೆ.

7) ಭೂ ಮಾಲೀಕರಿಂದ ಕರ್ನಾಟಕ ರಾಜ್ಯ ಎಸ್‌ಸಿ: ಎಸ್‌ಟಿ ಕಾರ್ಪೋರೇಷನ್‌ರವರ ಮೂಲಕ ಭೂಮಿಯನ್ನು ಪಡೆದು, ಭೂ ರಹಿತರಿಗೆ ಹಂಚಲಾಗಿದೆ. ಅಲ್ಲದೇ ಆಶ್ರಯ ಯೋಜನೆ ಅಡಿಯಲ್ಲಿ ಮನೆಗಳನ್ನು ನಿರ್ಮಿಸಿಕೊಡಲಾಗಿದೆ.

ರಾಜ್ಯದಲ್ಲಿ ಅಂಗವಿಕಲರಿಗೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

60 (214) : ಶ್ರೀಮತಿ ರೇವು ನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗವಿಕಲರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಉದ್ಯೋಗದಲ್ಲಿರುವ ಅಂಗವಿಕಲರೆಷ್ಟು;

ಇ) ಈ ಅಂಗವಿಕಲರುಗಳಿಗೆ ಸರ್ಕಾರದಿಂದ ಸಿಗುತ್ತಿರುವ ವಿವಿಧ ರೀತಿಯ ಸೌಲಭ್ಯಗಳೇನು;

ಈ) ಎಷ್ಟು ಜನರಿಗೆ ಮಾಶಾಸನ ಸಿಗುತ್ತಿದೆ ಮತ್ತು ಮಾಶಾಸನ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು, ಯಾವಾಗ ಮಂಜೂರು ಮಾಡಲಾಗುವುದು (ಗುಲ್ಬರ್ಗಾ ಜಿಲ್ಲೆ, ಕಮಲಾಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಬಾಕಿ ಇರುವ ಅರ್ಜಿಗಳೆಷ್ಟು);

ಉ) ಇವರುಗಳಿಗೆ ಮಾಸಿಕ ಉಚಿತ ಬಸ್ ಪಾಸ್‌ಗಳನ್ನು ನೀಡಲಾಗಿದೆಯೇ ಇದರ ಪ್ರಯೋಜನ ಪಡೆದಿರುವವರೆಷ್ಟು?